**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,**

**ಹೊನ್ನಾವರ**

**ಸಿ. ಸಿ. ನಂ. 569/2024**

**ಚಾ.ಸಾಃ 1, ಫ್ರಾ.ಸಾಃ 3**

| | |
|---|---|
| ಸಾಕ್ಷಿದಾರನ ಹೆಸರು | ಮಹಾಂತೇಶ ನಾಯ್ಕ |
| ತಂದೆಯ ಹೆಸರು | ಉದಯ ನಾಯ್ಕ |
| ವಯಸ್ಸು | 35 ವರ್ಷಗಳು |
| ಉದ್ಯೋಗ | ಆರಕ್ಷಕ ಉಪ-ನಿರೀಕ್ಷಕರು, ರಾಮನಗರ ಠಾಣೆ, ಜೋಯಿಡಾ ತಾಲೂಕು. |
| ವಾಸ್ತವ್ಯ | ರಾಮನಗರ |

**ಸಾಕ್ಷಿಯನ್ನು ದಿನಾಂಕಃ 02-05-2025 ರಂದು ಕರೆಸಿ ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಎಪಿಪಿಯವರಿಂದ,**

ನಾನು ದಿನಾಂಕ 13-04-2021 ರಿಂದ 12-09-2024 ರ ವರೆಗೆ ಹೊನ್ನಾವರ ಪೋಲೀಸ್ ಠಾಣೆಯಲ್ಲಿ ಆರಕ್ಷಕ ಉಪ-ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 12-08-2024 ರಂದು ಬೆಳಿಗ್ಗೆ 11-00 ರ ಸಮಯದಲ್ಲಿ ನಾನು ಠಾಣೆಯಲ್ಲಿದ್ದಾಗ ಚಾಸಾ-4 ರವರು ಕರೆ ಮಾಡಿ ಚಂದಾವರ ನಾಕಾದಿಂದ ಮಾರುತಿ ದೇವಸ್ಥಾನದ ಕಡೆಗೆ ಹೋಗುವ ರಸ್ತೆಯಲ್ಲಿ ಒಬ್ಬ ವ್ಯಕ್ತಿಯು ತನ್ನ ವಾಸದ ಮನೆಯಲ್ಲಿ ಅಕ್ರಮ ಮದ್ಯವನ್ನು ಮಾರಾಟ ಮಾಡಲು ಅಕ್ರಮವಾಗಿ ತನ್ನ ಮನೆಯಲ್ಲಿ ಇಟ್ಟುಕೊಂಡಿರುವುದಾಗಿ ಮಾಹಿತಿ ನೀಡಿದ್ದು, ಅದರಂತೆ ನಾನು ಈ ವಿಚಾರವನ್ನು ಮೇಲಾಧಿಕಾರಿಗಳಿಗೆ ತಿಳಿಸಿ, ಘಟನಾ ಸ್ಥಳವು ವಾಸದ ಮನೆಯಾಗಿದ್ದರಿಂದ ಚಾಸಾ-10 ರವರ ಮೂಲಕ ಭಟ್ಕಳ ಉಪ ವಿಭಾಗದ ಡಿವೈಎಸ್‌ಪಿ ರವರಿಗೆ ಸರ್ಚ ವಾರಂಟ್‌ಗಾಗಿ ಮನವಿ ಸಲ್ಲಿಸಿರುತ್ತೇನೆ. ಅದೇ ದಿನ ಮಧ್ಯಾಹ್ನ 12-30 ರ ಸಮಯಕ್ಕೆ ಚಾಸಾ-10 ರವರು ಸರ್ಚ ವಾರಂಟ್ ಪಡೆದುಕೊಂಡು ಬಂದಿರುತ್ತಾರೆ. ಅದರಂತೆ ಮಧ್ಯಾಹ್ನ 12-35 ರ ವೇಳೆಗೆ ನಾನು ಚಾಸಾ-5 ರಿಂದ 8 ರವರನ್ನು ಇಲಾಖಾ ವಾಹನದಲ್ಲಿ ಹೊರಟು ಮಧ್ಯಾಹ್ನ 01-00 ಗಂಟೆಯ ಸಮಯಕ್ಕೆ ಚಂದಾವರ ಸೇತುವೆಯ ಹತ್ತಿರ ಹೋಗಿ ಚಾಸಾ-4 ರವರ ಮೂಲಕ ಚಾಸಾ-2 ಮತ್ತು 3 ರವರನ್ನು ಪಂಚರಾನ್ನಾಗಿ ಬರಮಾಡಿಕೊಂಡಿದ್ದು, ಅವರಿಗೆ ಮಾಹಿತಿ ತಿಳಿಸಿದ್ದು, ಅವರು ಒಪ್ಪಿಕೊಂಡಿದ್ದು, ಅವರಿಗೆ ನೋಟಿಸ್ ನೀಡಿರುತ್ತೇನೆ. ನಂತರ ಅಲ್ಲಿಂದ ಹೊರಟು 01-20 ರ ವೇಳೆಗೆ ಮಾಹಿತಿ ಬಂದ ಆರೋಪಿ ಮನೆ ಹತ್ತಿರ ಹೋಗಲಾಗಿ ಚಾಸಾ-4 ರವರು ಸುಮಾರು 50 ಅಡಿ ದೂರದಿಂದ ಆರೋಪಿ ಮನೆಯನ್ನು ತೋರಿಸಿರುತ್ತಾರೆ. ಅದರಂತೆ ಮಧ್ಯಾಹ್ನ 01-30 ರ ಸಮಯದಲ್ಲಿ ಆರೋಪಿಯ ಮನೆಯ ಮೇಲೆ ಪಂಚರ ಸಮಕ್ಷಮ ದಾಳಿ ಮಾಡಿ ಆತನ ಮನೆಯಲ್ಲಿ ಒಬ್ಬ ವ್ಯಕ್ತಿ ಇದ್ದು, ಆತನ ಹೆಸರು ಮತ್ತು ವಿಳಾಸ ಕೇಳಲಾಗಿ ಅರುಣ ತಂದೆ ಕೇಶವ ಎಂದು ತಿಳಿಸಿರುತ್ತಾನೆ. ಆತನಿಗೆ ದಾಳಿಯ ಮಾಹಿತಿ ತಿಳಿಸಿ ಆತನ

ಮನೆಯನ್ನು ಪರಿಶೀಲಿಸಿದಾಗ ಅಡುಗೆ ಮನೆಯ ದಕ್ಷಿಣದಲ್ಲಿ ಎರಡು ಕೆಂಪು ಬಣ್ಣದ ಪ್ಲಾಸ್ಟಿಕ್ ಚೀಲದಲ್ಲಿ ಮತ್ತು ಒಂದು ರಟ್ಟಿನ ಬಾಕ್ಸನಲ್ಲಿ ಮದ್ಯ ಇರುವುದು ಕಂಡು ಬಂದಿರುತ್ತದೆ. ಆರೋಪಿಯ ಬಳಿ ಅವುಗಳ ಬಗ್ಗೆ ಲೈಸನ್ಸ ಕೇಳಿದಾಗ ಇಲ್ಲವೆಂದು ಹೇಳಿರುತ್ತಾನೆ. ಪಂಚರ ಸಮಕ್ಷಮ ಅವುಗಳನ್ನು ತೆರೆದು ನೋಡಿದಾಗ ಕೆಂಪು ಬಣ್ಣದ ಪ್ಲಾಸ್ಟಿಕ್ ಚೀಲದಲ್ಲಿ 500 ಎಮ್ ಎಲ್ ನ 17 ಯುಬಿ ಎಕ್ಸಪೊರ್ಟ ಬಿಯರ್ ಟಿನಗಳು, 180 ಎಮ್ ಎಲ್ ನ 9 ಬೆಂಗಳೂರು ವಿಸ್ಕಿ ಪೌಚ್ ಗಳು, 90 ಎಮ್ ಎಲ್ ನ 138 ಓಸಿ ಡಿಲಕ್ಸ ವಿಸ್ಕಿ ಪೌಚ್ ಗಳು, 90 ಎಮ್ ಎಲ್ ನ 84 ಹೈವರ್ಡ್ಸ ಚಿಯರ್ಸ ವಿಸ್ಕಿ ಪೌಚ್ ಗಳು, 180 ಎಮ್ ಎಲ್ ನ 20 ಓಟಿ ವಿಸ್ಕಿ ಪೌಚ್ ಗಳು ಇದ್ದವು. ನಂತರ ಸದರಿ ಮದ್ಯಗಳನ್ನು ಪ್ಲಾಸ್ಟಿಕ್ ಚೀಲಗಳನ್ನು ಮತ್ತು ರಟ್ಟಿನ ಬಾಕ್ಸಗಳನ್ನು ಅಮಾನತ್ತು ಪಡಿಸಿಕೊಂಡು ಎಲ್ಲಾ ಮದ್ಯವನ್ನು ರಾಸಾಯನಿಕ ಪರೀಕ್ಷೆಗಾಗಿ ಮಾದರಿ ತೆಗೆದು ಬಿಳಿಯ ಚೀಲದಲ್ಲಿ ಹಾಕಿ ಸೀಲ್ ಮಾಡಿ ಪಂಚರ ಸಹಿ ತೆಗೆದುಕೊಂಡಿರುತ್ತೇನೆ. ಈಗ ಬಗ್ಗೆ ವಿವರವಾದ ಪಂಚನಾಮೆಯನ್ನು ಮಧ್ಯಾಹ್ನ 01–00 ರಿಂದ 02–15ರ ಸಮಯದಲ್ಲಿ ತಯಾರಿಸಿ ಈ ಬಗ್ಗೆ ಫೋಟೋ ತೆಗೆದು ಸಂಪೂರ್ಣ ದಾಳಿಯ ವಿವರವನ್ನು Sony Handy Camera ದಲ್ಲಿ ಚಿತ್ರಿಕರಣ ಮಾಡಿಕೊಂಡಿದ್ದು, ಸದರಿ ಚಿತ್ರಿಕರಣವನ್ನು Laptop ಹಾಕಿ ಡಿವಿಡಿಗೆ Download ಮಾಡಿ ಪಂಚರ ಸಮಕ್ಷಮ Hashing ವರದಿಯನ್ನು ತಯಾರಿಸಿರುತ್ತೇನೆ. ಸದರಿ ಪಂಚನಾಮೆಯನ್ನು ಈಗ ನೋಡುತ್ತಿದ್ದು ನಿಪಿ–1 ಎಂದು ಗುರುತಿಸಿದ್ದು, ಸಾಕ್ಷಿ ಸಹಿಯನ್ನು ನಿಪಿ–1(ಸಿ) ಎಂದು ಗುರುತಿಸಲಾಯಿತು. Hashing ವರದಿಯನ್ನು ನೋಡುತಿದ್ದು ನಿಪಿ–2 ಎಂದು ಗುರುತಿಸಿದ್ದು, ಸಾಕ್ಷಿ ಸಹಿಯನ್ನು ನಿಪಿ–2(ಸಿ) ಎಂದು ಗುರುತಿಸಲಾಯಿತು. ಚಿತ್ರಿಕರಣ ಸಿಡಿಯನ್ನು ನೋಡುತಿದ್ದು ನಿಪಿ–3 ಎಂದು ಗುರುತಿಸಲಾಯಿತು.

ನಂತರ ಆರೋಪಿಯನ್ನು ವಶಕ್ಕೆ ಪಡೆದು ಠಾಣೆಗೆ ಬಂದು ಒಂದು ದೂರನ್ನು ತಯಾರಿಸಿ ಠಾಣಾಧಿಕಾರಿಯವರ ಮುಂದೆ ದೂರು, ಆರೋಪಿ, ಪಂಚನಾಮೆ ಮತ್ತು ಅಮಾನತ್ತುಪಡಿಸಿಕೊಂಡ ಮದ್ಯವನ್ನು ಹಾಜರು ಪಡಿಸಿರುತ್ತೇನೆ.

ನಾನು ನೀಡಿದ ದೂರನ್ನು ಈಗ ನೋಡುತ್ತಿದ್ದು ನಿಪಿ–4 ಎಂದು, ಸಾಕ್ಷಿಯ ಸಹಿಯನ್ನು ನಿಪಿ–4(ಎ) ಎಂದು ಗುರುತಿಸಲಾಯಿತು. ಸರ್ಚ ವಾರಂಟನ್ನು ನೋಡುತ್ತಿದ್ದು ಅದನ್ನು ನಿಪಿ–5 ಎಂದು, ಸಾಕ್ಷಿಯ ಸಹಿಯನ್ನು ನಿಪಿ–5(ಎ) ಎಂದು ಗುರುತಿಸಲಾಯಿತು.

ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿ ಗೈರು ಹಾಜರು, ಗುರುತಿನ ಬಗ್ಗೆ ತಕಾರಾರು ಇಲ್ಲ ಎಂದು ಆರೋಪಿ ಪರ ವಕೀಲರು ತಿಳಿಸಿರುತ್ತಾರೆ.

ಆ ದಿನ ಮಾದರಿ ತೆಗೆದ ಪೌಚುಗಳು ಮತ್ತು ಟಿನಗಳನ್ನು ನೋಡಿದರೆ ಗುರುತಿಸುತ್ತೇನೆ.

ನ್ಯಾಯಾಲಯದ ಮುಂದೆ ಸೀಲು ಮಾಡಿರುವ ಬಿಳಿ ಬಣ್ಣದ ಚೀಲವನ್ನು ಎಪಿಪಿಯವರು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು. ಬಳಿ ಬಣ್ಣದ ಪ್ಲಾಸ್ಟಿಕ್ ಚೀಲವನ್ನು ತೆರೆಯಾಗಿ ಅದರಲ್ಲಿ ಬಿಳಿಯ ಬಟ್ಟೆಯ 7 ಸೀಲ್ ಮಾಡಿರುವ ಚೀಲಗಳಿದ್ದು ಅವುಗಳನ್ನು ತೆರೆಯಲಾಯಿತು. ಅವುಗಳಲ್ಲಿರುವ ವಿವಿಧ ನಮೂನೆಯ ಮದ್ಯದ ಪೌಚುಗಳನ್ನು, ಟೀನ್ ಗಳನ್ನು ಮತ್ತು ಎರಡು ಪ್ಲಾಸ್ಟಿಕ್ ಬ್ಯಾಗಗಳನ್ನು ನೋಡಿ ಗುರುತಿಸಿದ್ದು 7 ಬಟ್ಟೆಯ ಚೀಲದಲ್ಲಿರುವ ವಿವಿಧ ನಮೂನೆಯ ಮದ್ಯಗಳನ್ನು

ಮತ್ತು ಪ್ಲಾಸ್ಟಿಕ್ ಬ್ಯಾಗಗಳನ್ನು ಅದೇ ಕ್ರಮಾಂಕದಲ್ಲಿ ಒಟ್ಟಾರೆಯಾಗಿ ಮುಮಾ-1 ರಿಂದ 7 ಎಂದು ಗುರುತಿಸಲಾಯಿತು.

**ಪಾಟೀಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಎಸ್.ಜಿ.ಚಂದಾವರರಿಂದಃ**

ವಾಹನವನ್ನು ಆರೋಪಿ ಮನೆಯ ಹತ್ತಿರ ನಿಲ್ಲಿಸಿದ್ದೇವು. ನಾನು ಹೇಳಿರುವಂತೆ ನನಗೆ ಯಾವುದೇ ಮಾಹಿತಿ ಮಾಡಿಲ್ಲ. ನಾನು ಆರೋಪಿಯ ಮನೆಯ ಹತ್ತಿರ ಹೋಗಿಲ್ಲ ಎಂದರೆ ಸರಿಯಲ್ಲ. ಆರೋಪಿಯ ಮನೆಯಿಂದ ಯಾವುದೇ ಮಧ್ಯವನ್ನು ಅಮಾನತ್ತು ಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಅಂಕಿ ಅಂಶಗಳಿಗೋಸ್ಕರ ಸುಳ್ಳು ದೂರು ನೀಡಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೂ ಮುದ್ದೆಮಾಲಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ಅನಾಮದೇಯವಾಗಿ ಸಿಕ್ಕಿದ್ದ ಮಧ್ಯದ ಆಧಾರವಾಗಿ ಆರೋಪಿ ವಿರುದ್ಧ ಪ್ರಕಣದ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಪಂಚನಾಮೆಯನ್ನು ಠಾಣೆಯಲ್ಲಿ ತಯಾರಿಸಿದ್ದೇನೆ ಎಂದರೆ ಸರಿಯಲ್ಲ. ಕೇಸಿಗೆ ಅನೂಕೂಲವಾಗುವಂತೆ ದಾಖಲೆಗಳನ್ನು ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ಪ್ರತಿಯೊಂದು ಟೆಟ್ರಾ ಪ್ಯಾಕ್ ಗಳ ಮೇಲೆ ಮತ್ತು ಟಿನ್ ಗಳ ಮೇಲೆ ಪಂಚರ ಸಹಿ ಪಡೆದಿಲ್ಲ ಎಂದರೆ ಸರಿಯಲ್ಲ. ಆರೋಪಿಯ ವಿರುದ್ಧ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ.

**ಸಹಿ ಇದೆ.**

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ**